<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರವಾಗಿಃ ಶ್ರೀ ಬಿ.ಟಿ., ವಕೀಲರಿಂದಃ</u>

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತಿದ್ದು ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ದಿಃ 04.12.1980 ರ ಮೂಲ ಕ್ರಯಪತ್ರ ಹಾಜರುಪಡಿಸಿದ್ದು ಅದನ್ನು ನಿಡಿಃ 1 ಅಂತ, ಸಾಣಿಕೆರೆ ಗ್ರಾಮದ ಸರ್ವೆ ನಂಃ 09/1 ಪಿ5 ರ ಪಹಣಿ ಪತ್ರಿಕೆ ಹಾಜರುಪಡಿಸಿದ್ದು ಅದನ್ನು ನಿಡಿಃ 2 ಅಂತ ಗುರುತಿಸಲಾಯಿತು. ದಿಃ 06.01.2018 ರ ಮೂಲ ಮರಣ ಶಾಸನ ಪತ್ರ ಹಾಜರುಪಡಿಸಿದ್ದು ಅದನ್ನು ನಿಡಿಃ 3 ಅಂತ, ಸದರಿ ದಾಖಲೆಯನ್ನು ನಮ್ಮ ತಾಯಿಯಾದ ಈರಮ್ಮ ಇವರು ನಮ್ಮ ಹೆಸರಿಗೆ ಮರಣ ಶಾಸನ ಪತ್ರ ಬರೆದುಕೊಟ್ಟಿರುತ್ತಾರೆ. ಸದರಿ ಮರಣ ಶಾಸನ ಪತ್ರಕ್ಕೆ ಪ್ರತೀ ಪುಟಕ್ಕೆ ಹೆಬ್ಬೆಟ್ಟು ಗುರುತು ಹಾಕಿರುತ್ತಾರೆ. ಸದರಿಯವರ ಹೆಬ್ಬೆಟ್ಟು ಗುರುತನ್ನು ನೋಡಿದರೆ ಗುರ್ತಿಸುತ್ತೇನೆ. ಸದರಿ ಮರಣ ಶಾಸನ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿದವರ ಹೆಸರು ನೆನಪಿಲ್ಲ. ಅದೇ ರೀತಿ ಪತ್ರ ಯಾರು ಬರೆದಿರುತ್ತಾರೆ ಅಂತ ಸಹ ನನಗೆ ನೆನಪಿಲ್ಲ. ನನ್ನ ತಾಯಿ ಈರಮ್ಮ ಇವರ ಮರಣ ದಾಖಲೆ ಹಾಜರುಪಡಿಸಿದ್ದು ಅದನ್ನು ನಿಡಿಃ 4 ಅಂತ ಗುರುತಿಸಲಾಯಿತು.

**(ಪ್ರತಿವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್?ಸಿ., ಚಳ್ಳಕೆರೆ.